

# ಸೋನು ಸಿಕ್ರೇಟ್ ಕ್ಯಾರೆಕ್ಟರ್!

ತಮ್ಮ ನಿರ್ದೇಶನದ ಸಿನಿಮಾಗಳಷ್ಟೇ, ಅವುಗಳ ಪ್ರಚಾರಕ್ಕಾಗಿ ಮಾಡುವ ಗಿಮಿಕ್‌ಗಳಿಂದಲೂ ಹೆಸರಾಗಿರುವ ಆರ್. ಚಂದ್ರು, ಉಪೇಂದ್ರ ಅವರನ್ನು ಇಟ್ಟುಕೊಂಡು 'ಐ ಲವ್ ಯು' ಸಿನಿಮಾ ಮಾಡುತ್ತಿರುವುದು ಹಳೆಯ ಸುದ್ದಿ. ಈ ಚಿತ್ರದಲ್ಲಿ ಉಪೇಂದ್ರ ಅವರಿಗೆ ರಚಿತಾ ರಾಮ್ ನಾಯಕಿಯಾಗಿ ನಟಿಸುತ್ತಿರುವುದು ಎಲ್ಲರಿಗೂ ಗೊತ್ತು. ಆದರೆ ರಚಿತಾ ರಾಮ್ ಹೊರತಾಗಿ ಕನ್ನಡದ ಇನ್ನೊಬ್ಬ ನಟಿಯೂ ಮುಖ್ಯಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಸೋನು ಗೌಡ. ಸೋನು ಈ ಚಿತ್ರದಲ್ಲಿ ನಾಯಕಿಯಾ? ಯಾವ ಬಗೆಯ ಪಾತ್ರ? ಅತಿಥಿ ಪಾತ್ರವಾ ಎಂಬೆಲ್ಲ ಪ್ರಶ್ನೆಗಳಿಗೆ ಚಿತ್ರತಂಡವಂತೂ ಉತ್ತರ ನೀಡುತ್ತಿಲ್ಲ. ಅಷ್ಟೇ ಅಲ್ಲ, ಚಿತ್ರದ ಯಾವ ಪೋಸ್ಟರಿನಲ್ಲಿಯೂ ಸೋನು ಚಿತ್ರದ ಪತ್ತೆಯಿಲ್ಲ.

ಹಾಗಂತ ಸೋನುಗೌಡ ಈ ಚಿತ್ರದಲ್ಲಿ ನಟಿಸಿರುವುದನ್ನು ಚಿತ್ರತಂಡ ಗೌಪ್ಯವಾಗಿಟ್ಟಿಲ್ಲ. ಎಲ್ಲ ಪತ್ರಿಕಾಗೋಷ್ಠಿಗಳಲ್ಲಿ, ಚಿತ್ರದ ಕುರಿತ ಕಾರ್ಯಕ್ರಮಗಳಲ್ಲಿ ಸೋನು ಹಾಜರಾಗುತ್ತಿದ್ದಾರೆ. ಆದರೆ ತಮ್ಮ ಪಾತ್ರದ ಕುರಿತು ಮಾತ್ರ ಅವರು ತುಟಿಕ್ ಪಿಟಿಕ್ ಅನ್ನುತ್ತಿಲ್ಲ. 'ಪೋಸ್ಟರಲ್ಲಿ ಕಾಣಿಸಿಕೊಂಡಿಲ್ಲ ಎಂದು ನನಗೇನೂ ಬೇಸರ ಇಲ್ಲ. ಈ ಚಿತ್ರದಲ್ಲಿನ ನನ್ನ ಪಾತ್ರದ ತೀವ್ರತೆಯೇ ಹಾಗಿದೆ. ಅದು ಗೌಪ್ಯವಾಗಿದ್ದಷ್ಟೂ ಒಳ್ಳೆಯದು. ಖಂಡಿತ ಮುಖ್ಯವಾದ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದೇನೆ. ಆದರೆ ಅದು ಯಾವ ಬಗೆಯ ಪಾತ್ರ ಎನ್ನುವುದನ್ನು ನೀವು ತೆರೆಯ ಮೇಲೆಯೇ ನೋಡಬೇಕು. ಸಿನಿಮಾ ನೋಡಿದ ಮೇಲೆ ನನ್ನ ಪಾತ್ರ ನಿಮ್ಮ ಮನಸಲ್ಲಿ ಅಚ್ಚೊತ್ತುವುದಂತೂ ಖಚಿತ' ಎಂದು ಅವರು ಇತ್ತೀಚೆಗೆ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೊಂಡಿದ್ದಾರೆ.

# 'ಮೂಕವಿಸ್ಮಿತ' ಸಿನಿಮಾ!

ಸಾಹಿತ್ಯ ಕೃತಿಗಳನ್ನು ಆಧರಿಸಿದ ಸಿನಿಮಾಗಳು ಬರುವುದು ಕಮ್ಮಿಯಾಗಿದೆ ಎಂಬ ಆರೋಪ ಕೇಳಿಬರುತ್ತಲೇ ಇದೆ. ಇದೇ ಸಂದರ್ಭದಲ್ಲಿ 24ರ ಹರೆಯದ ಗುರುದತ್ ಎಂಬ ಯುವ ನಿರ್ದೇಶಕ ನಾಟಕ ಆಧರಿಸಿದ ಸಿನಿಮಾವೊಂದನ್ನು ಸದ್ದಿಲ್ಲದೇ ಕೈಗೆತ್ತಿಕೊಂಡಿದ್ದಾರೆ. ವಿಶೇಷ ಏನೆಂದರೆ ಇದು ಟಿ.ಪಿ. ಕೈಲಾಸಂ ಅವರ 'ಟೊಳ್ಳು ಗಟ್ಟಿ' ಎಂಬ ನಾಟಕವನ್ನು ಆಧರಿಸಿದ ಸಿನಿಮಾ. ಇದಕ್ಕೆ 'ಮೂಕವಿಸ್ಮಿತ' ಎಂದು ಶೀರ್ಷಿಕೆ ಇರಿಸಿಕೊಳ್ಳಲಾಗಿದೆ.

ಕೈಲಾಸಂ ನಾಟಕವನ್ನು ಇದ್ದ ಹಾಗೆಯೇ ತರುವ ಕಟ್ಟಳೆಯನ್ನೇನೂ ನಿರ್ದೇಶಕರು ಹಾಕಿಕೊಂಡಿಲ್ಲ. ಸುಮಾರು ಅರ್ಧಗಂಟೆಯ ರಂಗಪ್ರಯೋಗ ಆಗಬಹುದಾದ ಆ ನಾಟಕವನ್ನು ಇದ್ದ ಹಾಗೆ, ಇದ್ದಷ್ಟೇ ಸಿನಿಮಾ ಮಾಡುವುದು ಕಷ್ಟ ಕೂಡ. ಹಾಗಾಗಿ ಮೂಲ ಕಥಾಚಪ್ಪರಕ್ಕೆ ತಮ್ಮ ಸೃಜನಶೀಲತೆಯ ಬಳ್ಳಿಯನ್ನು ಹಬ್ಬಿಸಿ ಎರಡು ಗಂಟೆಗಳ ದೃಶ್ಯಫಲವನ್ನು ಬೆಳೆದಿದ್ದಾರೆ ಗುರುದತ್.

ಆ ನಾಟಕ ನಡೆಯುವ ಕಾಲಮಾನ 1920ರ ಸುಮಾರಿನದು. ಆದರೆ ಸಿನಿಮಾದಲ್ಲಿ ಅದನ್ನು 1950ರ ಕಾಲಮಾನಕ್ಕೆ ಒಗ್ಗಿಸಿಕೊಳ್ಳಲಾಗಿದೆ. ಅಷ್ಟೇ ಅಲ್ಲ, ಅದಕ್ಕೆ ಇನ್ನೊಂದು ಎಳೆಯನ್ನು ಸೇರಿಸಿ 2019ರ ಇಂದಿನ ಕಾಲದ ಎಳೆಯನ್ನೂ ಸೇರಿಸಿದ್ದಾರೆ.

ಶುಭಾರಕ್ಷಾ ಈ ಚಿತ್ರದ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಾಣಿಶ್ರೀ ಭಟ್, ಸಂದೀಪ್ ಮಲಾನಿ, ಗುರುದತ್, ಮಾವಳ್ಳಿ ಕಾರ್ತಿಕ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಹೊಸ ಕಾಲದ ಜನರು ನೋಡಿ ಎಂಜಾಯ್ ಮಾಡುವ ರಂಜನೀಯ ರೂಪದಲ್ಲಿಯೇ ಈ ಸಿನಿಮಾ ಇದೆ ಎಂಬುದು ಚಿತ್ರತಂಡದ ಅಂಬೋಣ.

ಶುಭಾರಕ್ಷಾ ಈ ಚಿತ್ರದಲ್ಲಿ ಇಂಗ್ಲಿಷ್ ವ್ಯಾಮೋಹ ಇರುವ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರಂತೆ. 'ಆ್ಯಪಲ್ ಕೇಕ್'ನ ನಂತರ ಒಳ್ಳೆಯ ಪಾತ್ರವೊಂದು ಸಿಕ್ಕಿದ ಖುಷಿಯಲ್ಲಿ ಅವರಿದ್ದಾರೆ.

ಕೈಲಾಸಂ ಅವರ ನಾಟಕಗಳು ಜನಪ್ರಿಯ. ಅದೇ ನಾಟಕವನ್ನು ಸಿನಿಮಾ ಮಾಧ್ಯಮಕ್ಕೆ ಒಗ್ಗಿಸಿದಾಗ ಎಷ್ಟು ಜನರಿಗೆ ಹಿತವೆನಿಸುವುದು ಎಂಬುದನ್ನು ಕಾದು ನೋಡಬೇಕಷ್ಟೆ.

